ಎಲ್ಲ ಭಾರತೀಯ ಭಾಷೆಗಳಲ್ಲೂ ಬಂದಿವೆ. ಬರುತ್ತಲೂ ಇವೆ. ಕಮರ್ಷಿಯಲ್ ಚಿತ್ರಕ್ಕೆ ಹೇಳಿ ಮಾಡಿಸಿದ ಕಥಾ ವಸ್ತುವನ್ನು ಮಾನವೀಯತೆ ಮತ್ತು ಭಾವುಕತೆಯ ನೆಲೆಯಲ್ಲಿ ಪರ್ಯಾಯ ಸಿನಿಮಾ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ವ್ಯವಸ್ಥೆಯ ಬಲಿ ಪಶುಗಳಾಗಿ ಕಮರಿ ಹೋಗುವ ಬಡವರು ಮತ್ತು ಅಸಹಾಯಕ ಹೆಣ್ಣುಮಕ್ಕಳ ಬದುಕಿನ ಸೂಕ್ಷ್ಮಗಳಿಗೆ ಭೂತಗನ್ನಡಿ ಹಿಡಿದಿದ್ದಾರೆ.

ಚಿತ್ರದ ನಾಯಕ ಅಮೀರ್ ಇಪ್ಪತ್ತರ ಹುಡುಗ. ಗೆಳೆಯನೊಬ್ಬನ ಜತೆ ಸೇರಿ ಮಾದಕ(ಡ್ರಗ್) ವಸ್ತುವನ್ನು ಮುಂಬಯಿನ ಹತ್ತಾರು ಅಂಗಡಿಗಳಿಗೆ ವಿಲೇವಾರಿ ಮಾಡುವ ಕೆಲಸ ಅವನದು. ಗೆಳೆಯನ ಬೈಕ್‌ನ ಹಿಂದೆ ಕುಳಿತು ಪೊಲೀಸರ ಕಣ್ಣು ತಪ್ಪಿಸಿ ಮಿಂಚಿನಂತೆ ಓಡಾಡಿ ತನ್ನ ಕೆಲಸ ಮಾಡುತ್ತಾನೆ. ಅವನ ಅಕ್ಕ ತಾರಾ ವಿಚ್ಛೇದಿತೆ. ದೋಬಿಘಾಟ್‌ನ ಲಾಂಡ್ರಿಯೊಂದರಲ್ಲಿ ಬಟ್ಟೆಗಳನ್ನು ಇಸ್ತ್ರಿ ಮಾಡಿ ಹಣಗಳಿಸುತ್ತ, ಹೊಸ ಬದುಕು ಕಟ್ಟಿಕೊಳ್ಳುವ ಪ್ರಯತ್ನದಲ್ಲಿದ್ದಾಳೆ.

ಒಂದು ಸಲ ಅಮೀರ್ ಪೊಲೀಸರ ಕಣ್ಣಿಗೆ ಬೀಳುತ್ತಾನೆ. ಅವರಿಂದ ತಪ್ಪಿಸಿಕೊಂಡು ಓಡುವಾಗ ದೋಬಿ ಘಾಟ್‌ಗೆ ನುಗ್ಗುತ್ತಾನೆ. ಕೈಯಲ್ಲಿದ್ದ ಮಾದಕ ವಸ್ತುವಿನ ಪ್ಯಾಕೆಟನ್ನು ಅಕ್ಕನ ಕೈಗಿಟ್ಟು ಓಡಿ ಹೋಗುತ್ತಾನೆ. ತಾರಾ ಅದನ್ನು ಬಟ್ಟೆಗಳ ನಡುವೆ ಅಡಗಿಸಿಟ್ಟು ಪೊಲೀಸರ ದಾರಿ ತಪ್ಪಿಸುತ್ತಾಳೆ.

ಬಟ್ಟೆಗಳ ನಡುವೆ ತಾರಾ ಅಡಗಿಸಿಟ್ಟ ಪ್ಯಾಕೆಟ್ ಇಸ್ತ್ರಿ ಅಂಗಡಿಯ ಮಾಲೀಕ, ಮಧ್ಯವಯಸ್ಸಿನ ಮದ್ರಾಸಿ ಅಕ್ಷಿ ಕೈಸೇರುತ್ತದೆ. ಅದನ್ನು ತಾರಾಗೆ ಕೊಡುವ ನೆಪದಲ್ಲಿ ಅವಳ ಮೇಲೆ ತನಗಿರುವ ಆಸೆಯನ್ನು ಹೇಳಿಕೊಳ್ಳುತ್ತಾನೆ. ಅವಳನ್ನು ಬಲಾತ್ಕರಿಸಲು ಮುಂದಾಗುತ್ತಾನೆ. ಅವನಿಂದ  ತಪ್ಪಿಸಿಕೊಳ್ಳುವ ಭರದಲ್ಲಿ ತಾರಾ ಕೈಗೆ ಸಿಕ್ಕ ಕಲ್ಲಿನಿಂದ ಅಕ್ಷಿಯ ತಲೆಗೆ ಹೊಡೆಯುತ್ತಾಳೆ. ಅಕ್ಷಿ ಆಸ್ಪತ್ರೆ ಸೇರುತ್ತಾನೆ  ತಾರಾ ಕೊಲೆ ಯತ್ನದ ಆರೋಪಿಯಾಗಿ ಜೈಲು ಸೇರುತ್ತಾಳೆ. ಅಕ್ಕ ಜೈಲು ಶಿಕ್ಷೆಯಿಂದ ಪಾರಾಗಬೇಕಾದರೆ ಅಕ್ಷಿ ಗುಣಮುಖನಾಗಿ ಅವನೇ ತನ್ನ ತಪ್ಪನ್ನು ಒಪ್ಪಿಕೊಳ್ಳುವ ಹೇಳಿಕೆಯನ್ನು ಪೊಲೀಸರಿಗೆ ಕೊಡಬೇಕು. ಅವನನ್ನು ಒಪ್ಪಿಸುವ ಪ್ರಯತ್ನವಾಗಿ ಅಮೀರ್, ಅಕ್ಷಿಯ ಯೋಗಕ್ಷೇಮದ ಹೊಣೆ ಹೊರುತ್ತಾನೆ.

ಮಗ ಆಸ್ಪತ್ರೆ ಸೇರಿದ ಸುದ್ದಿ ತಿಳಿದ ಅಕ್ಷಿಯ ವೃದ್ಧ ತಾಯಿ ಮುಂಬಯಿಗೆ ಬರುತ್ತಾಳೆ. ಜತೆಯಲ್ಲಿ ಅಕ್ಷಿಯ ಇಬ್ಬರು ಹೆಣ್ಣು ಮಕ್ಕಳನ್ನೂ ಕರೆತರುತ್ತಾಳೆ. ಮಗನಿಗೆ ಏನಾಗಿದೆ ಎಂಬುದು ಅವಳಿಗೆ ಗೊತ್ತಿಲ್ಲ. ಅಜ್ಜಿ, ಮೊಮ್ಮಕ್ಕಳಿಗೆ ಹಿಂದಿ ಬಾರದು. ದೊಡ್ಡವಳಿಗೆ ಸ್ವಲ್ಪ ಇಂಗ್ಲಿಷ್ ಗೊತ್ತಿದೆ. ಅಜ್ಜಿ, ಮೊಮ್ಮಕ್ಕಳ ಬಡತನ, ಅಮಾಯಕತೆಗೆ ಮರುಗುವ ಅಮೀರ್ ಅವರಿಗೆ ತನ್ನ ಮನೆಯಲ್ಲಿ ಆಶ್ರಯ ಕೊಡುತ್ತಾನೆ. ತನ್ನ ಕುಟುಂಬದವರಂತೆ ಅವರನ್ನು ನೋಡಿಕೊಳ್ಳುತ್ತಾನೆ.

ಇರಾನಿನ ಬಹುತೇಕ ಸಿನಿಮಾ ನಿರ್ದೇಶಕರಿಗೆ ಮಕ್ಕಳ ಮನೋವಿಕಾಸದ ಬಗ್ಗೆ ಆಸಕ್ತಿ ಹೆಚ್ಚು. ಈ ಚಿತ್ರದಲ್ಲೂ ಮಜಿದಿ ಅಕ್ಷಿಯ ಮಕ್ಕಳ ಭವಿಷ್ಯದ ಕನಸುಗಳನ್ನು ಗೋಡೆಯ ಮೇಲೆ ಚಿತ್ರಗಳ ರೂಪದಲ್ಲಿ ಬರೆಸುವ ಮೂಲಕ ಮಕ್ಕಳ ನಿಷ್ಕಲ್ಮಷ ಮನಸ್ಸುಗಳನ್ನು ಬಿಚ್ಚಿಡುತ್ತಾರೆ.

ಅಕ್ಕನ ಬಿಡುಗಡೆಗಾಗಿ ಅಕ್ಷಿಯ ಉಪಚಾರ ನೋಡಿಕೊಳ್ಳುತ್ತಿರುವ ಅಮೀರ್ ಅವನ ಮುಖ ನೋಡಿದ ಕೂಡಲೇ ಸಿಟ್ಟು, ಹತಾಶೆಗಳಿಂದ ಕುದಿಯುತ್ತಾನೆ. ಗೊಂದಲಕ್ಕೀಡಾಗುತ್ತಾನೆ. ಒಂದು ಹಂತದಲ್ಲಿ ಅವನ ದೊಡ್ಡ ಮಗಳನ್ನು ವೇಶ್ಯಾವಾಟಿಕೆಗೆ ಮಾರಾಟಮಾಡಲೂ ಪ್ರಯತ್ನಿಸುತ್ತಾನೆ. ಅವಳ ಮುಗ್ಧತೆ, ಅಮಾಯಕತನಕ್ಕೆ ಮರುಳಾಗಿ ಕೊನೆಯ ಕ್ಷಣದಲ್ಲಿ